For More Job-News visit: www.kpscvaani.com

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

2ನೇ ಮಹಡಿ, ಕೆ.ಹೆಚ್.ಐ ಕಾಂಪ್ಲೆಕ್ಸ್, ಕಾವೇರಿ ಭವನ, ಬೆಂಗಳೂರು-560 009 ಇ-ಮೇಲ್: sbmkarnataka1@gmail.com

ಕಡತ ಸಂಖ್ಯೆ: RDP/RDW&SD/113/SBM/2018 ದಿನಾಂಕ: 22.06.2020

ಪ್ರಕಟಣೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಜಲ ಜೀವನ ಮಿಷನ್ ಹಾಗೂ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯಡಿ ಕೇಂದ್ರ ಕಛೇರಿ ಹಾಗೂ ಜಿಲ್ಲೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಸಮಾಲೋಚಕರನ್ನು ನೇಮಿಸಿಕೊಳ್ಳಲು ಅರ್ಜಿ ಕರೆಯಲಾಗಿದೆ.

ಕ್ರ. ಸಂ.	ಹುದ್ದೆಯ ವಿವರ ಮತ್ತು ಸಂಖ್ಯೆ	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ ಮತ್ತು ಅನುಭವ	ಮಾಸಿಕ ಸಂಭಾವನೆ
	ಕೇಂದ್ರ ಕಛೇರಿ			
1	ದಾಖಲೆ ತಜ್ಞರು **Documentation Expert**	1	The candidate is required to possess a Post Graduate degree in Environmental Sciences / Natural Resources Management / Life Sciences (Additional courses on Mass media / Journalism / Development Studies / Social Science / Social Work would be added advantage) from a recognized university only. 5-8 years of relevant experience in documentation, research and/or knowledge management in the development sectors preferably in water and sanitation sectors.	₹ 50,000 to ₹ 60,000/-
2	ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ ತಜ್ಞರು **(M&E Expert)**	1	The candidate is required to possess a Post Graduate degree in Economics / Statistics / Public Policy from a recognized university only. 5-8 years of relevant experience in M&E, research, surveys, setting indicators, knowledge of evaluation methodologies, data collection, and data evaluation. Working on large scale missions/programs in the development sectors preferably in water and sanitation sectors.	₹ 50,000 to ₹ 60,000/-
3	ಮಾಹಿತಿ ನಿರ್ವಹಣಾ ವ್ಯವಸ್ಥೆ ತಜ್ಞರು **(MIS-Expert)**	1	The candidate is required to possess a Post Graduate degree in Statistics / Economics / Computer Science from a recognized university only. 5-8 years of relevant experience in data management, data research preferably in the developmental sectors.	₹ 50,000 to ₹ 60,000/-
4	ನೈರ್ಮಲ್ಯ ಅಭಿಯಂತರರು **(Sanitation Engineer)**	1	Post Graduate in Environmental or Civil Engineering from a recognized university only. with experience in toilet technologies/ Retrofitting, etc. 2 years experience in toilet technologies.	₹ 50,000 to ₹ 60,000/-
	ಜಿಲ್ಲಾ ಪಂಚಾಯತಿ ಕಛೇರಿ			
5	ಜಿಲ್ಲಾ ಯೋಜನಾ ವ್ಯವಸ್ಥಾಪಕ **(District Project Manager)**	30	The candidate is required to possess a Post Graduate degree in Management / Social Science / Social Work / relevant professional degree from a recognized university only. 8-10 years of relevant experience in project management / leading a team of experts in development sectors preferably in water, sanitation, and rural development sectors.	₹ 35,000 to ₹ 45,000/-
6	ಜಿಲ್ಲಾ **MIS** ಸಮಾಲೋಚಕರು	32	M.C.A/Statistics, M.Sc Computer Science / BE Computer Science from a recognized university only. 3-5 years of relevant experience in data management, data research preferably in the developmental sectors.	₹ 22,000 to ₹ 25,000/-

1) **ಗುತ್ತಿಗೆಯ ಅವಧಿ:** ಮೇಲಿನ ಹುದ್ದೆ ಸಂಪೂರ್ಣವಾಗಿ ತಾತ್ಕಾಲಿಕ ಹುದ್ದೆಯಾಗಿದ್ದು, ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗುವುದು ನಂತರ ಕಾಲಕಾಲಕ್ಕೆ ಅವರ ಕಾರ್ಯಕ್ಷಮತೆಯನ್ನು ಪರಿಶೀಲಿಸಿ ನವೀಕರಿಸಲಾಗುವುದು.

2) **ವಯೋಮಾನ:** ಪ್ರಕಟಣೆ ಹೊರಡಿಸಿದ ದಿನಾಂಕಕ್ಕೆ 45 ವರ್ಷಗಳು ಮೀರಿರಬಾರದು.

3) ನಿಗದಿತ ಅರ್ಜಿ ನಮೂನೆಯಲ್ಲಿ ಮಾಹಿತಿಯನ್ನು ತುಂಬಿ, ವಯಸ್ಸಿನ ದೃಢೀಕರಣ, ವಿದ್ಯಾರ್ಹತೆ, ಅನುಭವ, ಪ್ರಮುಖ ಸಾಮರ್ಥ್ಯಗಳು, Resume ಹಾಗೂ ಅರ್ಜಿ ಜೊತೆಗೆ "ನಾನು ಈ ಹುದ್ದೆಗೆ ಯಾವ ರೀತಿ ಸೂಕ್ತನಾಗಿದ್ದೇನೆ" ಎಂಬುದರ ಬಗ್ಗೆ ಒಂದು ಪುಟದಲ್ಲಿ ಟಿಪ್ಪಣಿ ಬರೆದು ಅರ್ಜಿಯನ್ನು ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕೆ.ಹೆಚ್.ಐ ಕಟ್ಟಡ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009 ಈ ವಿಳಾಸಕ್ಕೆ **ಅರ್ಜಿಯ ಹಾರ್ಡ್‌ಪ್ರತಿಯನ್ನು ದಿನಾಂಕ 09.06.2020 ರ ಸಂಜೆ 5:30 ಗಂಟೆಯೊಳಗೆ ಸಲ್ಲಿಸಬೇಕು.** ನಂತರ ಬಂದಂತಹ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. (ಅರ್ಜಿಯ ನಮೂನೆಯು **RDPR website: https://rdpr.kar.nic.in/** ನಲ್ಲಿ ಲಭ್ಯವಿರುತ್ತದೆ).

4) ಕ್ರಮ ಸಂಖ್ಯೆ 4 & 5 ಹುದ್ದೆಗಳಿಗೆ ಅಭ್ಯರ್ಥಿಗಳು ಅರ್ಜಿಯಲ್ಲಿ ಕಡ್ಡಾಯವಾಗಿ ಕಾರ್ಯನಿರ್ವಹಿಸಲು ಆಸಕ್ತಿಹೊಂದಿರುವ 3 ಆದ್ಯತೆಯ ಜಿಲ್ಲೆಗಳನ್ನು ನೀಡುವುದು.

5) ಸ್ನಾತಕೋತ್ತರ ಪದವಿಯನ್ನು ದೂರ ಶಿಕ್ಷಣ ಮುಖಾಂತರ ಪಡೆದಿದ್ದರೆ, ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ ಹಾಗೂ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

6) ಆಯ್ಕೆಯಾದ ಅಭ್ಯರ್ಥಿಯು ನಿಗದಿತ ನಮೂನೆಯಲ್ಲಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಬೇಕು ಹಾಗೂ ಅನುಭವದ ಆಧಾರದ ಮೇಲೆ ಮಾಸಿಕ ಸಮಾಲೋಚನಾ ಶುಲ್ಕ ನಿಗಧಿಪಡಿಸಲಾಗುವುದು.

7) ಕರಾರು ಒಪ್ಪಂದ ಮಾಡಿಕೊಂಡ ಅಭ್ಯರ್ಥಿಗೆ ಇಲಾಖೆಯಲ್ಲಿನ ಯಾವುದೇ ಹುದ್ದೆಗಳಲ್ಲಿ ವಿಲೀನಗೊಳ್ಳಲು / ಮುಂದುವರೆಯಲು ಯಾವುದೇ ಹಕ್ಕು ಇರುವುದಿಲ್ಲ.

8) ಕಿರುಪಟ್ಟಿ ಅಭ್ಯರ್ಥಿಗಳಿಗೆ (Shortlisted candidates) ಅವರುಗಳ ದೂರವಾಣಿ ಮುಖಾಂತರ ತಿಳಿಸಲಾಗುವುದು.

9) ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನವನ್ನು ಕೇಂದ್ರ ಕಛೇರಿ ಹಾಗೂ ಆಯಾ ಜಿಲ್ಲಾ ಪಂಚಾಯತಿ ಕಛೇರಿಯಲ್ಲಿ ವಿಡಿಯೋ ಸಂವಾದದ ಮೂಲಕ ನಡೆಸಲಿದ್ದು, ನಿಗಧಿಪಡಿಸಿದ ದಿನಾಂಕ ಮತ್ತು ವೇಳೆಯಲ್ಲಿ ಹಾಜರಾಗುವುದು.

10) ನೇಮಕಾತಿಯನ್ನು ಪೂರ್ಣವಾಗಿ ಮತ್ತು ಭಾಗಶಃ ರದ್ದು ಮಾಡುವ/ ಮುಂದೂಡುವ ಹಕ್ಕನ್ನು ಇಲಾಖೆಯು ಹೊಂದಿರುತ್ತದೆ.

11) ಜಿಲ್ಲಾವಾರು ಖಾಲಿಯಿರುವ ಹುದ್ದೆಗಳ ಸಂಖ್ಯೆಯು ಹೆಚ್ಚಳ ಹಾಗೂ ಕಡಿಮೆಯಾಗಬಹುದು.

12) ಹುದ್ದೆಯು ಜಿಲ್ಲಾಮಟ್ಟದ ಹುದ್ದೆಯಾಗಿರುವುದರಿಂದ ಆಯ್ಕೆಯಾದ ಅಭ್ಯರ್ಥಿಗಳು ಜಿಲ್ಲಾಮಟ್ಟದಲ್ಲಿ ಕಾರ್ಯನಿರ್ವಹಿಸಬೇಕಾಗಿರುತ್ತದೆ.

(ಸಹಿ/-) ಆಯುಕ್ತರು

ವಾಸಾಸಂಇ/ಜೆಂ.ನ/178/2020-21

ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ